ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರಾದ ನರೇಂದ್ರಬಾಬುರವರು ಬೇರೆ ಬೇರೆ ರಾಜ್ಯಕ್ಕೆ ಇಲ್ಲಿರತಕ್ಕಂಥ ಕ್ರೀಡಾಪಟುಗಳು ವಲಸೆ ಹೋಗುತ್ತಿದ್ದಾರೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ಅವರು ಜಾರ್ಖಂಡ್‌ಗೆ ಹೋಗಿದ್ದಾರೆ. ಅವರು ಅಲ್ಲಿಗೆ ಏಕೆ ಹೋಗಿದ್ದಾರೆಂದರೆ, ಅಲ್ಲಿ ಕ್ರೀಡಾಪಟುಗಳಿಗೆ ತರಬೇತಿ ಕೊಡಲಿಕ್ಕೆ ತರಬೇತಿದಾರರಿಗೆ ಹೆಚ್ಚಿನ ಹಣವನ್ನು ಕೊಡುತ್ತಾರೆ. ನಮ್ಮಲ್ಲಿ ಆ ರೀತಿ ಕೊಡಲಿಕ್ಕೆ ಆಗಿಲ್ಲ. ಈಗ ತಾವು ಹೇಳಿರತಕ್ಕಂಥ ಮಾತನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಕ್ರೀಡಾಪಟುಗಳ ಪ್ರತಿಭೆ ಅರಳುವ ರೀತಿಯಲ್ಲಿ ತರಬೇತಿಯನ್ನು ಕೊಡಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

ಕರ್ನಾಟಕದಲ್ಲಿರುವ ಮಾಜಿ ಸೈನಿಕರಿಗೆ ಅಧಿಕ ಸೇವಾ ಅವಧಿಯ ಮಾನ್ಯತೆ ನೀಡುವ ಬಗ್ಗೆ

248 (1527) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದಲ್ಲಿ ಮರು ನೇಮಕಗೊಂಡ ಮಾಜಿ ಸೈನಿಕರಿಗೆ ನಾಗರಿಕ ಸೇವಾ ನಿಯಮಗಳು 1958ರ ನಿಯಮದ 247ಎ (1) ಮತ್ತು (5) ರನ್ವಯ 8 ವರ್ಷ ಅಧಿಕ ಸೇವಾ ಅವಧಿಯ (Weightage) ಮಾನ್ಯತೆ ನೀಡುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅಧಿಸೂಚನೆ ಸಂಖ್ಯೆ ಎಫ್‌ಡಿ/ಎಸ್‌ಆರ್‌ಎ 2004 ದಿನಾಂಕ: 4–11–2004 ರಲ್ಲಿ 8 ವರ್ಷಗಳ ಬದಲಾಗಿ 4 ವರ್ಷಗಳೆಂದು ತಿದ್ದುಪಡಿ ಮಾಡಲು ಕಾರಣವೇನು;

ಇ) ಇದರಿಂದ ಮಾಜಿ ಸೈನಿಕರು ಯುದ್ಧದಲ್ಲಿ ಮಾಡಿದ ಸೈನಿಕರ ಮಡದಿ (ವಿಧವೆಯರು) ಹಾಗೂ ಮಾಜಿ ಸೈನಿಕರಿಗೆ ಅವಲಂಬಿತರಿಗೆ ಅನ್ಯಾಯವಾಗಿರುವುದು ನಿಜವಲ್ಲವೆ;

ಈ) ಹಾಗಿದ್ದಲ್ಲಿ 8 ವರ್ಷದಿಂದ 4 ವರ್ಷ ಕಡಿತಗೊಳಿಸಿರುವುದನ್ನು ಸರಿಪಡಿಸಿ ಮಾಜಿ ಸೈನಿಕರಿಗೆ ನ್ಯಾಯ ದೊರಕಿಸಿಕೊಡಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಗಮ 247–ಎ(1) ಅನ್ನು ಈ ಹಿಂದೆ ರೂಪಿಸಿದಾಗ ರಾಜ್ಯ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸು 55 ಆಗಿದ್ದು, ಪ್ರಸ್ತುತ ವಯೋನಿವೃತ್ತಿ ವಯಸ್ಸು 58 ಆಗಿರುತ್ತದೆ. ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247–ಎ(1) ಅನ್ನು ತಿದ್ದುಪಡಿ ಮಾಡಲಾಗಿದೆ.

ಇ) 'ಅ' ಪ್ರಶ್ನೆಗೆ ನೀಡಿರುವ ಉತ್ತರದ ಹಿನ್ನಲೆಯಲ್ಲಿ ಇದು ಅನ್ಯಾಯವೆಂದು ಪರಿಗಣಿಸಲಾಗದು.

ಈ) ಈಗಾಗಲೇ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 247–ಎ (1) ತಿದ್ದುಪಡಿಯಾಗಿರುವುದರಿಂದ, ಇದು ಸಾಧ್ಯವಾಗುವುದಿಲ್ಲ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾಜಿ ಸೈನಿಕರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 1958ರ ನಿಯಮ 247–ಎ(1) ಮತ್ತು (5)ರ ಅನ್ವಯ 8 ವರ್ಷ ಅಧಿಕ ಸೇವಾ ಅವಧಿಯ ಮಾನ್ಯತೆ ನೀಡುವುದು ಸರ್ಕಾರದಲ್ಲಿದೆ. ಅದಕ್ಕೆ 2004ರ ನವೆಂಬರ್ ನಲ್ಲಿ ತಿದ್ದುಪಡಿ ತಂದು 8 ವರ್ಷಗಳ ಕಾಲ Weightage ಅನ್ನು continue ಮಾಡಬೇಕೆಂದು ನಾನು ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. 8 ವರ್ಷಗಳಿಂದ 4 ವರ್ಷಗಳೆಂದು ತಿದ್ದುಪಡಿ ಮಾಡಿರುವುದನ್ನು ರದ್ದು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಅದನ್ನು ಕಡಿಮೆ ಏನೂ ಮಾಡಿಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 247–ಎ(1) ರನ್ವಯ ಮಾಜಿ ಸೈನಿಕರಿಗೆ 8 ವರ್ಷ ಅಧಿಕ ಸೇವಾ ಅವಧಿ ನೀಡಲಾಗುತ್ತಿತ್ತು. ಆಗ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 55 ಆಗಿತ್ತು. ಆದರೆ ಇತ್ತೀಚೆಗೆ ಆ ನಿವೃತ್ತಿ ವಯಸ್ಸನ್ನು 58ಕ್ಕೆ ಏರಿಸಿದ್ದೇವೆ. ಆ ಕಾರಣಕ್ಕಾಗಿ ಅಧಿಕ ಸೇವಾ ಅವಧಿ ಕಡಿತಗೊಂಡಿದೆ. 58 ವರ್ಷ ನಿವೃತ್ತಿ ವಯಸ್ಸಿಗೆ ಅನುಗುಣವಾದಂತಹ ರೀತಿಯಲ್ಲಿ ಕರ್ನಾಟಕ

ನಾಗರೀಕ ಸೇವಾ ನಿಯಮಾವಳಿಯ ನಿಯಮ 247–ಎ(1)ಕ್ಕೆ ತಿದ್ದುಪಡಿ ಮಾಡಲಾಗಿದೆ. ನಮ್ಮ ಒಳಾಡಳಿತ ಇಲಾಖೆಯ ಮುಖಾಂತರ ಆ ಅಧಿಕ ಸೇವಾ ಅವಧಿಯನ್ನು ಹೆಚ್ಚಿಸಲಿಕ್ಕೆ ಆರ್ಥಿಕ ಇಲಾಖೆಗೆ ನಾವು ಪ್ರಸ್ತಾವಿಸಿದ್ದೆವು. ಆದರೆ ಆರ್ಥಿಕ ಇಲಾಖೆಯವರು ಅದಕ್ಕೆ ತಮ್ಮ ಸಹಮತಿಯನ್ನು ಕೊಡುತ್ತಿಲ್ಲ. ಆದರೂ ತಾವು ಪ್ರಸ್ತಾಪಿಸಿದಂತಹ ಸಮಸ್ಯೆ ಮಾನವೀಯ ದೃಷ್ಟಿಯುಳ್ಳದ್ದಾಗಿರುವುದರಿಂದ, ಇದನ್ನು ಪರಿಶೀಲಿಸಿ ಮಾಜಿ ಸೈನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇವೆ. ಆದರೆ ತಾವು ಹೇಳಿದಂತೆ ಸರ್ಕಾರ ನಾಲ್ಕು ವರ್ಷ ಕಡಿತ ಮಾಡಿಲ್ಲ. ಆದರೆ ಈ ತಾರತಮ್ಯ ಹೆಚ್ಚಿದೆ. ಮತ್ತೆ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ಉಪ ಮುಖ್ಯಮಂತ್ರಿಗಳ ಬಳಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿ, ನಾನೂ ಕೂಡ ಪ್ರಸ್ತಾಪ ಮಾಡುತ್ತೇನೆ ಎನ್ನುವಂಥಹ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಸೈನಿಕರ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆಯ ಕಾರ್ಯಾಲಯವೊಂದನ್ನು start ಮಾಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ : ಆ ಬಗ್ಗೆ ಪರಿಶೀಲಿಸಿ ಸರ್ಕಾರ ಶೀಘ್ರದಲ್ಲಿ ಕ್ರಮ ಕೈಗೊಳ್ಳುತ್ತದೆ.

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ತಡೆ ಹಿಡಿಯಲಾದ ಪ್ರಶ್ನೆಗೆ ಉತ್ತರಿಸಲು ಒಂದು ದಿವಸ ಹೆಚ್ಚು ಕಾಲಾವಕಾಶವನ್ನು ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದು ಕೋರಿದ್ದಾರೆ. ಅವರಿಗೆ ಸದ್ಯಕ್ಕೆ ಪೂರ್ಣ ಮಾಹಿತಿ ಸಿಕ್ಕಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಸದನ ಇನ್ನು ಮೂರು ದಿವಸ ಮಾತ್ರ ನಡೆಯುತ್ತದೆ. ಅವರು ಇನ್ನಷ್ಟು ಸಮಯಾವಕಾಶ ಕೇಳುತ್ತಿದ್ದಾರೆ. ಹಾಗಾದರೆ ನಮ್ಮ ಪ್ರಶ್ನೆಗೆ ಯಾವಾಗ ಉತ್ತರ ಸಿಗುತ್ತದೆ?

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಒಂದು ದಿವಸ ಮಾತ್ರ ಕಾಲಾವಕಾಶ ಕೇಳಿದ್ದಾರೆ. ತಮ್ಮ ಪ್ರಶ್ನೆಗೆ ಅವರು ನಾಳೆ ಉತ್ತರ ಕೊಡುತ್ತಾರೆ..